ಶ್ರೀ ಕೆ. ಜೆ. ಜಾರ್ಜ್ (ಮಾನ್ಯ ಗೃಹ ಸಚಿವರು): ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಎಲ್ಲಾ ದಾಖಲೆಗಳನ್ನು ತರಿಸಿ ಕ್ರಮ ತೆಗೆದುಕೊಳ್ಳುತ್ತೇನೆ.

(5) **ವಿಷಯ:** ಕೊರಟಗೆರೆ ತಾಲ್ಲೂಕಿನಲ್ಲಿ ಎದುರಿಸುತ್ತಿರುವ ಕುಡಿಯುವ ನೀರಿನ ಸಮಸ್ಯೆ ಬಗ್ಗೆ.

ಶ್ರೀ ಪಿ.ಆರ್ ಸುಧಾಕರ್ ಲಾಲ್ (ಕೊರಟಗೆರೆ): ಮಾನ್ಯ ಅಧ್ಯಕ್ಷರೆ, ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿಗೆ ಬಹಳಷ್ಟು ಸಮಸ್ಯೆ ಆಗಿ ಹಳ್ಳಿಗಳಲ್ಲಿ ಜನಗಳಿಗೆ ಬಹಳ ತೊಂದರೆಯಾಗುತ್ತಿದೆ. ಸರ್ಕಾರ ಅತಿ ಜರೂರಾಗಿ ಕ್ರಮ ತೆಗೆದುಕೊಂಡು ನಮ್ಮ ಜನಗಳಿಗೆ ಕಡಿಯುವ ನೀರನ್ನು ಕೊಡತಕ್ಕಂತಹ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) (ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆ ಎಂದು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಬಹುಶಃ ಇವತ್ತು ಸಚಿವ ಸಂಪುಟದ ಉಪ ಸಮಿತಿ ಸಭೆ ಸೇರಬೇಕಾಗಿತ್ತು ಕಾಲಾವಕಾಶ ಇಲ್ಲ. ನಾಳೆ ಸಭೆ ಸೇರುವವರಿದ್ದೇವೆ ನಾಳೆಯೇ ತೀರ್ಮಾನ ಮಾಡುತ್ತೇವೆ. ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು ಎಲ್ಲೆಲ್ಲಿ problematic villages ಇವೆ, immediate ಆಗಿ ಬೋರ್‌ವೆಲ್‌ಗಳನ್ನು ಕೊರೆಯಬೇಕೆಂದು ಸೂಚನೆಗಳನ್ನು ಕೂಡ ಕೊಡುತ್ತೇನೆ.

ಶ್ರೀ ಪಿ.ಆರ್ ಸುಧಾಕರ್‌ಲಾಲ್: ನಮಗೆ ಹಣ ಕೊಟ್ಟು ಅನುಮತಿ ಕೊಟ್ಟರೆ ಯಾವ ಹಳ್ಳಿಯಲ್ಲಿ ಸಮಸ್ಯೆ ಇದೆ, ಅಲ್ಲಿ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ: ನೀವು ಅಲ್ಲಿ ಏನು ಹಣವನ್ನು ಖರ್ಚು ಮಾಡಿದ್ದೀರಿ, ಅವೆಲ್ಲವೂ ಸರ್ಕಾರಕ್ಕೆ ವರದಿ ಬಂದಿದೆ. ನನಗೂ ಕೂಡ ಮಾಹಿತಿ ಇದೆ. ಅದರ ಬಗ್ಗೆ ನಾಳೆಯೇ ಕ್ರಮ ತೆಗೆದುಕೊಳ್ಳುತ್ತೇವೆ.